— ವಾರದ ಸಂಚಿಕೆ —

Reg No. M 1299 (Founded 1917) Daily & Weekly

ಸತ್ಯವಾದಿ

SATYAVADI

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 28 ಸಂಚಿಕೆ 174 | ಸೋಮವಾರ 2—4—45 | 6 ಪೈ

ಮೈಸೂರು ಪೌರಸಭಾ ವಿಾಟಿಂಗು

ಮೊನ್ನೆ ಶನಿವಾರ ರಾತ್ರಿಯಾಸಿಯ ಪೌರಸಭೆಯ ವಿಾಟಿಂಗು ಶ್ರೀ ರಾಮಚಂದ್ರರಾವ್ ಬೊಂಭೋರೆಯವರ ಅಧ್ಯಕ್ಷತೆಯಲ್ಲಿ ನಡೆಯಿತು.

ಶ್ರೀ ಎಫ್. ಸಿ. ದೇವರಾಜೀ ಅರಸು ನವರು ಇಲ್ಲಿಯ ಕೃಷ್ಣರಾಜೇಂದ್ರ ಆಸ್ಪತ್ರೆಯ ಮುಂದೆ ಹೆಣ ಬಿದ್ದಿದ್ದು ಒಪಳ ಹೊತ್ತಿನ ವೇಳೆ ಸರಿಸಿದ್ದನ್ನು ಪ್ರೆಸಿಡೆಂಟರ ಗಮನಕ್ಕೆ ತಂದರು.— ಬೆಂಗಳೂರು ಬೊಂಬೂ ಬಜಾರಿನಲ್ಲಿ ಸಪ್ಪಳಪಟ್ಟವರ ನಿಧಿಗೆ ರೂ. 1000 ಕೊಡಲು ತೀರ್ಮಾನಿಸಿದ್ದು.— ಕಳೆದ ಪೌರಸಭೆಯ ಕಾರ್ಯಕಲಾಪಗಳು 'ಮೈಸೂರು ಪತ್ರಿಕೆ' 'ದೇಶಬಂಧು' ವಿನಲ್ಲಿ ಸರಿಯಾಗಿ ವರದಿಮಾಡಿಲ್ಲವೆಂಬ ಆಕ್ಷೇಪಣೆಗೆ ಪ್ರೆಸಿಡೆಂಟರು ಪತ್ರಿಕಾ ಪ್ರತಿನಿಧಿಗಳ ಕಡೆಗೆ ತಿರುಗಿ, ಸರಿಯಾಗಿ ವಾರ್ತೆ ಕೊಡಬೇಕೆಂದರು.— ಈ ಚೆಗೆ ಪ್ರೆಸಿಡೆಂಟರು ರಾಜಧಾನಿಗೆ ಬಂದಿದ್ದಾಗ 25 ಸಾವಿರ ರೂ. ವಿಚರ್ಚಾಗಿದ್ದು ಖರ್ಚಾಗಿನ್ನು ಬೆಳ್ಳಿ ಭಂಗಾರದಲ್ಲಿ ಮಾಡಿಸಿದ್ದು, ರಸ್ತೆ ರಿಪೇರಿ ಮುಂತಾದವುಗಳಿಗೆ ಬಂದು ಹೋಗಲಾಯಿತು.— ಒಡವರಿಗೆ ಮನೆ ಕಟ್ಟಲು ಪಡವಾರಹಳ್ಳಿಯಲ್ಲಿ 300 ಮನೆಗಳಿಗೆ ಅನುಕೂಲ ಪಡಿಸಿದೆ. ಒಬ್ಬರು 25 ಮನೆಗಳನ್ನು ಕಟ್ಟಿ ಪೌರಸಭೆಯವರು ಗೊತ್ತು ಮಾಡುವ ಬಾಡಿಗೆಗೆ ಕೊಡುವರೆಂದು, ಇತರ ಮಹನೀಯರೂ ಹೀಗೆ ಮುಂದೆ ಬರಬೇಕೆಂದೂ ಅಧ್ಯಕ್ಷರು ಹೇಳಿದರು.— ಚಿಕ್ಕ ಕಂಟ್ರಾಕ್ಟ್ ಎಂದರೆ ರೂ. 500 ಕ್ಕೆ ಕಮ್ಮಿಯಾಗುವ ಕೆಲಸವೆಂದು ತೀರ್ಮಾನಿಸಿದರು.— ಎಲ್ಲಿಕ್ ಫೌಂಟನ್ನಿಂದ ಡಿ|| ಅಫೀಸಿಗೆ ಹೊಸ ರಸ್ತೆ ಹಾಕುವುದನ್ನು ಮುಂದಿನಂತರ ಮಾಡಲು ಸರ್ಕಾರಕ್ಕೆ ಶಫಾರಸ್ಸು ಮಾಡಬೇಕೆಂದು ತೀರ್ಮಾನಿಸಿದರು.— ವಿಲ್ಲುಗಳ ಲೈಸೆನ್ಸ್, ಕುದುರೆ ಶಕ್ತಿ 1-5 ರೂ. 5, 5-10, 1-0-0, 10 ರಿಂದ 1-8-0 ಯಂತೆ ವಸೂಲ್ಮಾಡಬೇಕೆಂದು ತೀರ್ಮಾನವಾಯಿತು.— ಸೋಡಾಫ್ಯಾಕ್ಟರಿಗಳು ಇನ್ನು ಮುಂದೆ 30 ರೂ. ಲೈಸೆನ್ಸ್ ಫೀ ಕೊಡಬೇಕೆಂದು ನಿರ್ಣಯಿಸಿದರು.— ವೈಸ್ ಪ್ರೆಸಿಡೆಂಟರವರ ಆಫೀಸಿನ ಟೆಲಿಫೋನು ಈಗ 2 ವರೆ ತಿಂಗಳಿಂದ ತೆಗೆದಿದ್ದರ ಮೇಲೆ ತೀವ್ರವಾಗಿ ಟೀಕೆಯಾಯಿತು; ಈಗ 3 ದಿನಸಗಳಿಂದ ಅವರ ಆಫೀಸಿಗೆ ಫೋಕ್ ಕೊಟ್ಟಿರುತ್ತೇವೆಂದು ಅಧ್ಯಕ್ಷರು ತಿಳಿಸಿದರು.— ಶ್ರೀ ವಿ. ಡಿ. ರಾಜಾಂತಮ್ ಮೊದಲಿಯಾರ್ ರವರು ನಿರ್ಗತಿಕರ ಸಹಾಯಕ್ಕೆ ರೂ- 10 ಸಾವಿರ ರೂ- ದಾನಾ ಮಾಡಿದ್ದನ್ನು ಪೌರಸಭೆಯವರು ಕೃತಜ್ಞತೆಯಿಂದ ಸ್ವೀಕರಿಸಿದರು.— ಸಿಟಿ ಬಸ್ ಸರ್ವಿಸ್ಸನ್ನು ಪೌರಸಭೆಯವರು ನಡೆಸಬೇಕೆಂಬ ನಿರ್ಣಯವೆ ಅಂಗೀಕರಿಸಲ್ಪಟ್ಟಿತು.



ಜೆ. ಹಾಲ್, ಸೆರಾಫ್ ಅಂಗಡಿ
ರಸ್ತೆ ಬೀದಿ, ಮೈಸೂರು.

ಚಕ್ರವರ್ತಿಗಳು

ಪ್ರಾಣಭಿಕ್ಷೆ ದಯಪಾಲಿಸಲಿಲ್ಲ

ಚಿವ ರೂ ಮತ್ತು ಅಸ್ತಿ ಮೊಹಿದ್ದಪ್ಪನ ಯ ಪ್ರೈದಿಗಳ ಪೈಕಿ ಮರಣ ದಂಡನೆಗೆ ತುತ್ತಾಗಿರುವ 7 ಮಂದಿಯು ಪರವಾಗಿ ಚಕ್ರವರ್ತಿಯವರಲ್ಲಿ ಸಲ್ಲಿಸಿದ್ದ ಪ್ರಾಣ ಭಿಕ್ಷೆ ಅರ್ಜಿ ನಿರಾಕರಿಸಲ್ಪಟ್ಟಿತೆಂದು ತಿಳಿಯಬಂದಿದೆ. ಈ ನಿರಾಕರಣೆ ಒಗ್ಗೆ ಗಾಂಧೀಜಿ ಅನುಮತಿ ಸೂಚಿಸಿದ್ದಾರೆ.

ವಿವಿಧ ವರ್ತಮಾನ

ಡ್ಯಾನ್ಜಿಗ್ ರಷ್ಯನರ ವಶವಾಯಿತು ಇದು ಬಾಲ್ಟಿಕ್ಕಿನ ಪ್ರಮುಖ ರೇವು.

o o

ರಷ್ಯನರು ಆಸ್ಟ್ರಿಯಾ ಗಡಿಯನ್ನು ದಾಟಿರುವರು.

o o

ಬೊಂಬಾಯಿ ಸರಕಾರದ ಒಡ್ಡಿಟ್ಟಿನಲ್ಲಿ 20 ಸಾವಿರ ಉಳಿತಾಯ ಕಂಡು ಬಂದಿದೆಯಂತೆ. ಹೊಸ ಕಂದಾಯ ಹಾಕುವುದಿಲ್ಲವಂತೆ.

o o

1000 ಬೇಲುಗಳಿಗಿಂತ ಹೆಚ್ಚಾಗಿ ಒಟ್ಟೆಯನ್ನು ಬೊಂಬಾಯಿನಿಂದ ಬಂಗಾಳಾಕ್ಕೆ ಕಳುಹಿಸಲಾಗಿದೆ.

o o

ಸೆಂಟ್ರಲ್ ಸ್ಟೂಡಿಯೋವನ್ನು ಗ್ವಾಲಿಯರ್ ಮಹಾರಾಜರು ತೆಗೆದುಕೊಳ್ಳಲು ತವಕಪಡುತ್ತಿರುವರೆಂದು ಒಂದು ವಾರ್ತೆ ಬಂದಿದೆ.

o o

ವಿಖ್ಯಾತ ಸಿನಿಮಾ ತಾರೆ ವತ್ಸಲ ಕುಮಟೇಕರ್ ಸ್ವರ್ಗಸ್ಥಳಾದಳೆಂದು ತಿಳಿಯಬಂದಿದೆ.

o o

ತಕದೀರ್ ಚಿತ್ರದಲ್ಲಿ ಪ್ರಥಮಪಾತ್ರವಹಿಸಿ ಖ್ಯಾತಿ ಪಡೆದಿರುವ ನಾರ್ಗಿಸಳ ಒಂದೊಂದು ಚಿತ್ರದಲ್ಲಿ ಅಭಿನಯಿಸಲು 75 ರೂ. ಕೊಡಬೇಕಂತೆ.

o o

ಸ್ಯಾಥಿಯೇಟರ್ಸ್‌ನವರು ತಾವು ಕೈಗೊಂಡಿರುವ 'ಕೃಷ್ಣಾಕಾಂತನ ಉಯಿಲು' ಚಿತ್ರ ತಯಾರಿಕೆಗೆ ರೂ. 30 ಸಾವಿರ ಕೊಟ್ಟು ಪುರಂದರನ ಕಾಲದ ನೋಡಲು ಮನೋಹರವಾಗಿರುವ ಒಂದು ಹಾಸಿಗೆಯನ್ನು ಒಬ್ಬ ಜವಿಾನ್ದಾರರಿಂದ ಕೊಂಡಿದ್ದಾರೆ.

ಈ ವಾರ ನಿಮ್ಮ ಗ್ರಹಗತಿಗಳು ಹೇಗಿವೆ !

(ಓಂ ಜ್ಯೋತಿಷ್ಯರಿಂದ)

ಮೇಷ — ಈ ವಾರ ಆರೋಗ್ಯ ಚನ್ನಾಗಿರುತ್ತದೆ. ಆರ್ಥಿಕ ಸ್ಥಿತಿಗಳು ಸ್ವಲ್ಪವನ್ನಟ್ಟಿಗೆ ಅನುಕೂಲವಾಗಿಯೇ ಇರುತ್ತದೆ. ಉದ್ಯೋಗ ಸ್ಥಿತಿಗಳಲ್ಲಿ ಕಾರ್ಯಕ್ರಮವು ಸ್ವಲ್ಪ ಹಿಂದೆ ಬೀಳುಬಹುದು. ಕೋರ್ಟು ವ್ಯವಹಾರದಲ್ಲಿ ಅನುಕೂಲವು ಲಭಿಸುವುದು.

ವೃಷಭ — ನಿಮ್ಮ ಕಾರ್ಯಗಳಲ್ಲಿ ಜಯವಿದೆ. ಬಂಧುಗಳ ಆಗಮನವಿದೆ. ವ್ಯಾಪಾರದಲ್ಲಿ ಲಾಭವಿದೆ ಸ್ತ್ರೀಯರೊಂದಿಗೆ ಕಲಹವಾಗುವ ಸಂಭವವಿರಬಹುದು. ಜಾಗ್ರತೆಯಿಂದಿರಿ.

ಮಿಥುನ — ಆರೋಗ್ಯದಲ್ಲಿ ಅನುಮಾನವಿದೆ. ಆರ್ಥಿಕವಾಗಿಯೂ ಸ್ವಲ್ಪ ಅನಾನುಕೂಲವಿದೆ. ವೃತ್ತಿ ವ್ಯಾಪಾರಗಳಲ್ಲಿ ಅಷ್ಟು ಅನುಕೂಲವಿಲ್ಲ.

ಕರ್ಕಾಟಕ — ನಿಮ್ಮ ವ್ಯವಹಾರಗಳಲ್ಲಿ ಜಾಗರೂಕರಾಗಿರಿ. ವಿಶ್ವಾಸ ಸಹಾಯದಿಂದಲೇ ನಿಮ್ಮ ಕಷ್ಟಗಳು ದೂರವಾಗುವವು. ಅಂತರಂಗಿಕ ಮಿತ್ರರಿಂದ ರಹಸ್ಯ ವಿಚಾರಗಳು ತಿಳಿದುಬರುವವು. ಸಮಾಜದಲ್ಲಿ ಕೀರ್ತಿಯು ಲಭಿಸುವುದು. ದಾನ ಧರ್ಮಗಳಲ್ಲಿ ಇಚ್ಛೆಯು ಲಭಿಸುವುದು.

ಸಿಂಹ — ಉದ್ಯೋಗದ ಅಭಿವೃದ್ಧಿಯ ವಿಷಯದಲ್ಲಿ ನಿಮ್ಮ ಪ್ರಯತ್ನಗಳು ಸಫಲವಾಗುವವು. ವ್ಯಾಪಾರ ಲಾಭವಿದೆ. ವಿಲಾಸ, ವಿಹಾರ, ಸಂತೋಷ ಕೂಟಗಳಿಗಾಗಿ ಧನ ವ್ಯಯವಾಗುತ್ತದೆ. ಮಿತ್ರರಿಂದಲೂ ಬಂಧುಗಳಿಂದಲೂ ಆನಂದ ಪ್ರಾಪ್ತಿಯಾಗುತ್ತದೆ. ವ್ಯಾಪಾರದಲ್ಲಿ ಉಂಟಾಗುವ ಅವಕಾಶವನ್ನು ಕಳೆದುಕೊಳ್ಳಬೇಡಿ.

ಕನ್ಯಾ — ವ್ಯಾಪಾರ ಉದ್ಯೋಗಗಳಲ್ಲಿ ಹೆಚ್ಚು ಅವಕಾಶಗಳು ದೊರೆಯುತ್ತವೆ. ಆದರೆ ಕೆಲವರು ನಂಬಿಕೆಯನ್ನುಂಟುಮಾಡಿ ಮೋಸಮಾಡುವ ಸಂಭವವಿದೆ. ಆರೋಗ್ಯವು ಅಷ್ಟು ತೃಪ್ತಿಕರವಾಗಿರುವುದಿಲ್ಲ. ಸಾಮಾಜಿಕ ಕಾರ್ಯಗಳು ಸ್ವಲ್ಪ ಹಿಂದೆ ಬೀಳುವುವು.

ತುಲಾ — ನಿಮ್ಮ ಕಾರ್ಯಗಳನ್ನು ಕೈಗೊಳ್ಳಲು ಇದು ಅನುಕೂಲವಾದ ಕಾಲ. ನಿಮ್ಮ ಅಭಿವೃದ್ಧಿಗೆ ಸರಿಯಾದ ಮಾರ್ಗಗಳು ಕಂಡು ಬಂದಾಗ ಆ ಅವಕಾಶಗಳನ್ನು ಸಂದೇಹ ಪಟ್ಟು ಕಳೆದುಕೊಳ್ಳಬೇಡಿ. ಸಂಘದಲ್ಲಿ ಅಶಾಂತಿ. ನೂತನ ಕಾರ್ಯಗಳಲ್ಲಿ ಲಾಭ.

ಮೈಚಿತ್ — ಮಕ್ಕಳ ಆರೋಗ್ಯ ವಿಷಯದಲ್ಲಿ ಜಾಗ್ರತೆ ವಹಿಸಿರಿ. ಹೊಗಸರೊಂದಿಗೆ ಕಲಹವನ್ನಿಟ್ಟು ಕೊಳ್ಳಬೇಡಿ ಹೊಸ ಉದ್ಯಮಕ್ಕೆ ಕೈ ಹಾಕಬೇಡಿ.

ಧನಸ್ಸು — ವ್ಯವಹಾರದಲ್ಲಿ ನಷ್ಟವಾಗುವ ಸಂಭವವಿದೆ. ವೇಲಿನ ಅಧಿಕಾರಿಗಳ ಸಂದರ್ಶನ ಲಾಭದಾಯಕವಾಗುವುದು. ಪ್ರಯಾಣ ಲಾಭಕರವು

ಮಕರ — ಶ್ರದ್ಧೆಯನ್ನು ವಹಿಸಬೇಕು. ನೀವು ನಿಮ್ಮ ಕಾರ್ಯಗಳಲ್ಲಿ ಕೃತಕಾರ್ಯರಾಗುವುದು ಅಸಂಭವ. ಉದ್ಯೋಗ ನೌಕರಿಗಳಲ್ಲಿ ನಿಮ್ಮ ಜವಾಬ್ದಾರಿಯು ಹೆಚ್ಚುವ ಸೂಚನೆಯಿದೆ. ಅರ್ಥಿಕವಾಗಿ ಅಷ್ಟೇನೂ ಲಾಭವಾಗದು. ನೀಚರು ನಿಮ್ಮ ಸ್ವಯತ್ನಗಳಿಗೆ ಭಂಗವನ್ನುಂಟು ಮಾಡಲು ಪ್ರಯತ್ನಿಸುವರು. ಚೋರರ ಭಯವು ಕಾಣುತ್ತದೆ. ಜಾಗ್ರತೆ.

ಕುಂಭ — ಪರಿಸ್ಥಿತಿಯು ಸ್ವಲ್ಪ ಕಷ್ಟವಾಗಿಯೇ ಇರುವುದು. ಋಣ ಪರಿಹಾರ ವಿಷಯದಲ್ಲಿ ಸಮಾಧಾನವಿರುವುದಿಲ್ಲ. ಈ ಕಾರಣಗಳಿಂದ ನಿಮ್ಮ ಕೆಲಸಗಳಲ್ಲಿ ನಿಮಗೆ ಶ್ರದ್ಧೆಯು ತಗ್ಗುತದೆ ಮನೋಬಲವನ್ನು ಪರಿಶೀಲಿಸುವ ಕಾಲವಿದು. ನಿಮ್ಮ ಲೋಪಗಳನ್ನು ಬಹಿರಂಗಪಡಿಸಲು ಬಂಧುಗಳೂ, ಮಿತ್ರರೂ ಯತ್ನಿಸುವರು.

ಮೀನ — ವ್ಯಾಪಾರ ಉದ್ಯೋಗಗಳಲ್ಲಿ ಏರು ಇಳಿತಗಳು ಕಾಣಬರುತ್ತವೆ. ಮನಸ್ಸಿನಲ್ಲಿ ಮಂಡಿಗೆ ಮಾಡಿಕೊಳ್ಳುವುದಾಗಲಿ ಏನನ್ನೂ ಸಾಧಿಸುವುದಿಲ್ಲ. ಅದರಿಂದ ಯಾವ ಬಗೆಯಲ್ಲಿಯೂ ಯಾವ ತೆರನಾದರೆಯೂ ಪ್ರಾಪ್ತವಾಗುವುದಿಲ್ಲ

ಶತ್ರುಗಳ ಬಿಡುಗಡೆಯಾದ ರಾಜ್ಯಗಳಲ್ಲಿ ಜನರ ಮುಖನೋಡಲಾರದ ಹಾಗಿದೆ. ತಿನ್ನಲಿಕ್ಕೆ ಆಹಾರ ಇಲ್ಲದೆ ಜನರು ಸಂಕಟ ಕಂಗೆಟ್ಟಿರುವರು

ಂ ಂ

ಮುಂಬೈನಲ್ಲಿ ಈವರೆಗೆ 150 ಮನೆಗಳನ್ನು ಮಿಲಿಟರಿಯವರಿಗಾಗಿ ವಶಮಾಡಿಕೊಳ್ಳಲಾಗಿದೆ.

ಂ ಂ

ಹಿಟ್ಲರ್, ಹಿಮ್ಲರ್, ಮುಸೋಲಿನಿ ಟೋಕಿಯೋಗೂ, ರಿಬ್ಬನ್‌ಟ್ರಾಪ್ ಜೊತೆ ಬರ್ಲಿನ್ ವಿದೇಶಾಂಗ ಮಂತ್ರಿ ಮಂಡಲವೆಲ್ಲಾ ಸ್ವಿಸ್ ಗಡಿಯ ಕಾನ್‌ಸ್ಟನ್ಸ್‌ಗೂ ಹೊರಟಿರುವುದಾಗಿ ತಿಳಿದು ಬಂದಿದೆ.

ಹಿಟ್ಲರ್

ಮರೆಯಾಗಿರುವ ಸ್ಥಳ

ದಕ್ಷಿಣಜರ್ಮನಿಯಾದಲ್ಲಿ ನೋಡಲು ಎರಡು ಕಣ್ಣು ಸಾಲದಷ್ಟು ವೈಭವಿಯುವ ಬೆಟ್ಟಗುಡ್ಡ ಪ್ರದೇಶದಲ್ಲಿ ಹಿಟ್ಲರ್‌ನ ಗೋಪ್ಯದ ವಸತಿ ಇದೆ. ಈಗ ಇದನ್ನು ಜರ್ಮನಿಯ ನುರಿತ ಸೈನೀಕರು ಭದ್ರವಾಗಿ ಕಾಯುತ್ತಿರುವರು. ಇದೇ ಹಿಟ್ಲರಿನ ಹಳ್ಳಿಗಾಡಿನ ಮನೆ ಬೆರ್‌ಚ್‌ಟಿ 'ಗಾಡನ್ಸಿನ ಬರ್'ಗಾಫ್.

ಹಳ್ಳಿಯಲ್ಲಿದ್ದರೂ ಜನರ ಮನಸ್ಸನ್ನು ತೆರೆಯುವ ರೀತಿಯಲ್ಲಿ ಈಗಿನ ಕಾಲಕ್ಕೆ ತಕ್ಕ ರೀತಿಯಲ್ಲಿ ಕಟ್ಟಿದೆ. ಈ ಮನೆಯಲ್ಲಿ ಜೋಡಿಸಿರುವ ಸಾಮಾನುಗಳನ್ನು ನೋಡಿದರೆ ಎಂಥವರಿಗಾದರೂ ಅಲ್ಲಿರಲು ಮನಸ್ಸಾಗುವುದು. ಇಲ್ಲಿ ಹಿಟ್ಲರ್ ತನ್ನ ಆಪ್ತರ ಸಂಗಡ ಮಾತನಾಡುವನು. ಈ ನುಸಿಗೆ ಒಂದು ಸಣ್ಣ ಮುಸುಡಿ ಇದೆ. ಇದನ್ನು ಗಾಜಿನಿಂದಲೇ ಕಟ್ಟಿರುವರು. ಇದನ್ನು ಹತ್ತಿನಿಂತರೆ ಹಿಟ್ಲರ್ ಜನ್ಮಭೂಮಿಯಾದ ಆಸ್ಟ್ರೀಯವನ್ನು ನೋಡಬಹುದು. ಇಲ್ಲಿ ವಾಸವಾಗಿರುವವರನ್ನು ಯಾರೂ ಪತ್ತೆ ಹಚ್ಚುವ ಹಾಗಿಲ್ಲವೆನ್ನುತ್ತಾರೆ.

ಈ ಹಳ್ಳಿಗಾಡಿನ ಮನೆಯ ಹತ್ತಾರು ಫಾಸಲೆಯಲ್ಲಿರುವ ರೈತರನ್ನೆಲ್ಲಾ ಓಡಿಸಿ, ಅವರ ವಾಸಸ್ಥಳಗಳು ಹಿಟ್ಲರ್‌ನ ಆಪ್ತರಿಗೆ ಕೊಡಲಾಗಿದೆ. ಹಣವನ್ನು ನೀರಿನ ಹಾಗೆ ಚೆಲ್ಲಿ ಈ ಪ್ರದೇಶವನ್ನು ಇಂದ್ರಭವನವನ್ನಾಗಿ ಮಾಡಿರುವರು. ಇಲ್ಲಿಗೆ ಒಂದು ವೈಲಿಯಲ್ಲಿರುವ ಮತ್ತೊಂದು ಗುಡ್ಡದಲ್ಲಿ ರಷ್ಯಾ ಪ್ರೇಲಿಷ್ ಅಧಿಕಾರಿ ಕೈದಿಗಳನ್ನು ಬಂಧಿಸಲಾಗಿತ್ತು.

ಈ ಬೆಟ್ಟ ಗುಡ್ಡದ ಹಳ್ಳಿ ಮನೆಗೆ ಹೋಗಿಬರಲು ಸಣ್ಣಸಣ್ಣ ಅನೇಕ ಮಾರ್ಗಗಳಿವೆ. ಗುಹೆಗೆ ಪ್ರಾರಂಭದಲ್ಲಿ ಬಹು ಬಲವಾದ ತಾಮ್ರದ ತಗಡಿನಿಂದ ಮಾಡಿದ ಬಾಗಿಲಿದೆ. ಇದು ಭೂಮಟ್ಟಕ್ಕಿಂತ ೩೫೦ ಅಡಿ ಮೇಲಿದೆ. ಶ್ರೀರಂಗಪಟ್ಟಣವನ್ನು ಹೋಲಿಸಿ ನೋಡಿ

ಅಲ್ಲಿ ಹತ್ತಿರವಿರುವ ಅಂಟಿಸರ್ಸ್ ಬರ್ಗ್‌ನ ಗುಹೆಯಲ್ಲಿ ದೊಡ್ಡ ಮೋತೀ ಖಾನೆಯಿದೆ. ಇಲ್ಲಿ ನಾನಾ ಬಗೆಯ ಆಹಾರ ಪದಾರ್ಥ ಶೇಖರವಾಗಿದೆ. ಕುಡಿಯಲು ಸಿನೀರಿದೆ ಆಯುಧಗಳು ಯುದ್ಧಾಸ್ತ್ರಗಳೂ, ಸಿಡಿಗುಂಡುಗಳೂ ಇವೆಲ್ಲಾ ಹೇರಳವಾಗಿ ಶೇಖರಿಸಲಾಗಿದೆ. ಈ ಗುಹೆಯಲ್ಲಿ ಏಕಕಾಲದಲ್ಲಿ ೬೦ ಮಂದಿ ವಾಸಿಸುವುದಕ್ಕೆ ಅನುಕೂಲ ಪಡಿಸಿದೆ. ಗುಹೆಯಲ್ಲಿ ಗಾಳಿಯಾಡಲು ಏರ್ ಕಂಡಿಷನ್ ಅನುಕೂಲ ಪಡಿಸಿದೆ. ಇದಲ್ಲದೆ ಎಂಥಾ ಬಾಂಬ್ ಗ್ಯಾಸ್ ಅನ್ನಾದರೂ ತಡೆಯುವ ರೀತಿಯಲ್ಲಿ ಭದ್ರವಾಗಿ ಕಟ್ಟಿರುತ್ತಾರೆ.

ಇದರ ಪಕ್ಕದಲ್ಲೇ ಮತ್ತೊಂದು ಗುಡ್ಡದಲ್ಲಿ ವಿನಾಶಕ ವಿಮಾನದ ಫಿರಂಗಿಗಳಿವೆ ಇಲ್ಲಿ ಓಡಾಡುವ ಚಿಕ್ಕ ರೈಲಿನಲ್ಲಿ ಈಗ ಯಾರೂ ಓಡಾಡುವ ಹಾಗಿಲ್ಲ. ಈ ರೈಲನ್ನು ಎಸ್. ಎಸ್ ಗಾರ್ಡ್‌ಗಳೇ ನಡಿಸುವರು. ಇದರ ಪ್ರಯಾಣಿಕರು ಹಿಟ್ಲರ್‌ನನ್ನು ನೋಡುವ ಅಧಿಕಾರಿಗಳು ಮಾತ್ರ. ಈ ಪ್ರದೇಶವೆಲ್ಲಾ ಗೆಸ್ಟಾಪೊರವಂ ಆಡಳಿತದಲ್ಲಿದೆ.

ಇಲ್ಲಿ ಓಡಾಡುವ ರೈಲ್ವೆ ಪ್ರಯಾಣೀಕರನ್ನು ಈ ಗೆಸ್ಟಾಪೊನವರು ಒಬ್ಬೊಬ್ಬರನ್ನಾಗಿ ವಿಚಾರಿಸಿ ಅನುಮಾನ ಕಂಡವರನ್ನು ಕೂಡಲೆ ಹಿಂದಿರುಗಿಸುವರು. ಇಲ್ಲಿ ರಾಯಭಾರಿ ನಿರ್ವಾಹಕರನ್ನು ಬಿಡುವುದಿಲ್ಲ.

ಅಲ್ಲೆ ಮತ್ತೊಂದು ಗುಹೆಯಲ್ಲಿ ವಾನ್ ರಿಬ್ಬೆಂಟ್ರಾಪ್ ವಾಸಮಾಡುವುನು. ಹಿಟ್ಲರ್‌ನನ್ನು ನೋಡುವವರು ಇವನ ಸಂಗಡ ಮೊದಲು ಇಲ್ಲಿ ಮಾತುಕಥೆ ನಡೆಸಬೇಕು.

೨೧ ಮೈಲಿ ಆಳ, ೧೦ ಮೈಲಿ ಉದ್ದದ ಈ ಪ್ರದೇಶವನ್ನು ಸಿಡಿಮದ್ದಿನಿಂದ ಬಿತ್ತಲಾಗಿದೆ. ಒಂದು ಗುಂಡಿ ಅಮುಕಿದರೆ ಸಾಕು, ನಿಮಿಷಾರ್ಧದಲ್ಲಿ ಈ ಭಾಗವು ಛಿದ್ರಛಿದ್ರವಾಗುವುದು ಈ ಗುಂಡಿಯು ಹಿಟ್ಲರ್ ಕೂತುಕೊಳ್ಳುವ ಮೇಜಿನಲ್ಲಿದೆ.

ಹಿಟ್ಲರ್‌ನನ್ನು ಯಾವ ರೀತಿ ಶಿಕ್ಷೆ ಮಾಡಬೇಕೆಂದು ಒಬ್ಬ ಅಮೇರಿಕಾ ನೀಗ್ರೋ ಯುವತಿಯನ್ನು ಕೇಳಲು, ಹಿಟ್ಲರಿನ ಮುಖಕ್ಕೆ ಕಪ್ಪು ಮಸಿ ಬಳಿದು ಅಮೆರಿಕಾಕ್ಕೆ ಕಳುಹಿಸಿ ' ಎಂದಳಂತೆ.

ಂ ಂ

ಚುಂಕಿಂಗ್‌ನಲ್ಲಿ ಜನರಿಗೆ ತಿನ್ನಲ್ಲಿಕ್ಕೆ ಇಲ್ಲದಿದ್ದರೂ ಬೆಕ್ಕುಗಳು ಸುಖ ಜೀವನ ಮಾಡುತ್ತಿರುವವು ಅಲ್ಲಿ 30 ಲಕ್ಷ ಇಲಿಗಳು ಇವೆಂದು ಲೆಖ್ಖಾಚಾರ ಮಾಡಲಾಗಿದೆ. (ಸೆನ್ಸಸ್ ತೆಗೆದುಕೊಂಡರೋ ?) ಇದಕ್ಕಾಗಿ ಬೆಕ್ಕಿಗೆ ಗಿರಾಕಿ ಹೆಚ್ಚಿದೆ ಒಂದೊಂದು ಬೆಕ್ಕಿಗೆ 250ರ ಡಾಲರ್ ಕೊಟ್ಟರೂ ಸಿಗುವಂತಿಲ್ಲ.

ವಿವಿಧ ವಿಷಯ

ಗಡಿನಾಡಿನಲ್ಲಿ ಫೆಬ್ರವರಿಯಿಂದ 6000 ಉಪಾಧ್ಯಾಯರು ಸಂಬಳ ಸಾಲದೆಂದು ಮುಷ್ಕರ ಹಿಡಿದಿದ್ದರು. ಈಗ ಕೆಲಸಕ್ಕೆ ಹಿಂದಿರುಗಿದರು.

ಂ ಂ

ಯುದ್ಧವಾರ್ತೆ ಕಳುಹಿಸುವ 19 ಅಮೇರಿಕ ಸಂಸ್ಥೆಯವರಿಗೆ ಪ್ರೆ || ರೂಸ್ವೆಲ್ಟರು 1120 ಮಿಲಿಯ ಡಾಲರ್ ಕೊಡುತ್ತಿರುವರು.

ಂ ಂ

ಬ್ರಿಟನ್ನಿನಿಂದ ಭಾರತಕ್ಕೆ 2000 ಮೋಟಾರುಕಾರುಗಳು ಬರಲಿವೆ.

ಂ ಂ

ಭಾರತಕ್ಕೆ ಆಹಾರ ಮತ್ತು ಔಷಧಿಗಳನ್ನು ಕಳಿಸಲು ಅಮೇರಿಕಾದ ಫ್ರೆಂಡ್ಸ್ ಸರ್ವಿಸ್ ಕಮಿಟಿಯವರು ಇದೇ ಏಪ್ರಿಲ್ 3 ರಿಂದ 10 ಲಕ್ಷ ಡಾಲರ್ ಚಂದಾ ವಸೂಲ್ ಮಾಡುವುರಾಗಿರುವುರು.

ಂ ಂ

ಅಮೇರಿಕಾದಲ್ಲಿ ನೀಕಡಾ 50 ರಂತೆ ಸ್ತ್ರೀಯರು ಸೇನೆ ಡಿಪೋಗಳಲ್ಲಿ ಕೆಲಸ ಮಾಡುತ್ತಿರುವುರು.

ಂ ಂ

ಯುದ್ಧಾನಂತರ ವಿಮಾನ ಕಾರ್ಯಾಚರಣೆಯಲ್ಲಿ ಜರ್ಮನ್ ವಿಮಾನಗಳಿಗೆ ಅವಕಾಶ ಕೊಡವುದಿಲ್ಲ

ಂ

ಕೊಚಿನ್ನಲ್ಲಿ ಸರ್ಕಾರಿ ನೌಕರರ ಪತ್ನಿಯರು ವಹಾಜುನಾವಣೆಯಲ್ಲಿ ಭಾಗವಹಿಸಕೂಡದೆಂದು ಆಜ್ಞೆಯಾಗಿದೆ.

ಂ ಂ

ಲಂಡನ್ ಮೇಲೆ 'ವಿ' ಧಾಳಿ ಇನ್ನೂ ನಿಂತಿಲ್ಲ.

ಂ ಂ

ಭಾರತದ ಭವಿಷ್ಯ ಭಾರತೀಯರೇ ನಿರ್ಧರಿಸಬೇಕೆಂದು ನೈರೋಬಿಯಲ್ಲಿ ಆಗಾ ಖಾರವರು ಹೇಳಿದರು.

ಂ ಂ

ಕಲಕತ್ತಾದಲ್ಲಿ ಬಟ್ಟೆಗಳ ಅಧಿಕ ದಸ್ತಾನು ಮಾಡಿದ್ದರೆಂದು ೩೦೦ ಅಂಗಡಿಗಳ ಬಾಗಿಲುಗಳಿಗೆ ಬೀಗಮುದ್ರೆಯಾಗಿದೆ. ೫ ಲಕ್ಷ ರೂಪಾಯಿಗಳ ಬಟ್ಟೆಯು ಸರ್ಕಾರದ ವಶವಾಗಿದೆ.

ಂ ಂ

ಡ್ಯೂಕ್ ಆಫ್ ವಿಂಡ್ಸರರಿಗೆ ಕೆನಡಾ ಗವರ್ನರ ಪದವಿ ಬೇಕಂತೆ. ಆದರೆ ಅದು ಸಿಕ್ಕುತ್ತದಿಲ್ಲವಂತೆ.

ವಾರ್ತಾತರಂಗ

ಶಾಂತಿ ಸಂಧಾನ ಎಲ್ಲಿ ನಡೆಯುತ್ತೆ ? ಶಾಂತಿ ಕರಾರು ಎಲ್ಲಾಗುತ್ತೆ ? ಅನೇಕರಿಗಾದವರು ವಾಷಿಂಗ್ಟನ್ನಿನಲ್ಲಿ ಆಗಬೇಕೆನ್ನುತ್ತಾರೆ. ಫ್ರೆಂಚರು ಪ್ಯಾರಿಸ್ಸಿನಲ್ಲಿ ಆಗಬೇಕೆನ್ನುತ್ತಾರೆ. ರಷ್ಯನರು ಮಾಸ್ಕೋವಿನಲ್ಲಿ ಆಗಬೇಕನ್ನುತ್ತಾರೆ. ಬ್ರಿಟಿಷರು ಮಾತ್ರ ಇನ್ನೂ ಬಾಯಿ ಬಿಟ್ಟಿಲ್ಲ.

ಡೆಲ್ಲೀ ಕೇಂದ್ರ ಅಸೆಂಬ್ಲಿಯಲ್ಲಿ ಕಾಂಗ್ರೆಸ್-ಲೀಗ್ ಸದಸ್ಯರು ಹಣ ತಾಸಿನ ಮಸೂದೆಯನ್ನ 58-52 ಓಟುಗಳಿಂದ ತಿರಸ್ಕರಿಸಿದರು. ವೈಸರಾಯರು ತಫ್ತಾರನ್ನ ಮಾಡಬೇಕೆಂದು ಮತ್ತೆ ಸಂದೇಶ ಕಳುಹಿಸಿದರು. ಆದೂ 57-50 ಓಟುಗಳಿಂದ ತಿರಸ್ಕೃತವಾಯಿತು.

ಈಗಲ್ಲದಿದ್ದರೂ ಅಂತ್ಯಜಯ ನಮ್ಮದು. ದಕ್ಷಿಣ ಜರ್ಮನಿ. ಆಸ್ಟ್ರಿಯಾ. ಉತ್ತರ ಇಟಲಿ ಕಾಡುಗುಡ್ಡಗಳಲ್ಲಿ ನೆಲೆಕೊಂಡು ಯುದ್ಧಮಾಡುತ್ತೇವೆ, ಜಯಶೀಲರಾಗುತ್ತೇವೆ, ಗುನ್ಹಾತ್ಸ್ಕ್ರೈ ಇನ್ನು ಬಹಳ ವಿದೆ, ಹೀಗೆಂದು ಕೈಸೆರೆಯಾಗಿರುವ ನಾಜಿ ಮಿಲಿಟರಿ ಅಧಿಕಾರಿ ಯೊಬ್ಬನು ಹೇಳುತ್ತಿರಬಹುದು

ಮಿ || ಚರ್ಚಿಲ್ಲರು ರೈಲ್ ರಣರಂಗದಲ್ಲಿ ಮಿತ್ರರ ಶಾಣ್ಯವನ್ನು ಪರೀಕ್ಷಿಸುತ್ತಿದ್ದಾಗ ಜರ್ಮನ್ ಷೆಲ್ ಒಂದು ಹತ್ತಿರಬಿದ್ದಿತು. ಅಪಯವೇನೂ ಆಗಲಿಲ್ಲ.

ಚೀನಿ ಸೇನೀಕರಿಗೆ ಇದೇ ಏಪ್ರಿಲ್ 1 ರಿಂದ ಪ್ರತಿಯೊಬ್ಬನಿಗೂ 3600 ಕಲೋರಿ ಆಹಾರ ಮತ್ತು 600 ಗ್ರಾಂ ಪ್ರೋಟೀನ್ ಮತ್ತು ಅಧಿಕವಾಗಿ ಲವಣ ಪಿಟಮಿನ್ ಆಹಾರ ಕೊಡಲು ಅಮೇರಿಕಾದವರು ಅನುಕೂಲ ಪಡಿಸಿರುತ್ತಾರೆ.

500 ಅಮೇರಿಕ ಕಾರೇಗಾರರು35000 ಚೀನಿಗಳನ್ನು ಮೆಕಾನಿಕ್‌ರನ್ನಾಗಿ ತಯಾರು ಮಾಡಲು ಚೈನಾಕ್ಕೆ ಇಇಷ್ಟರಲ್ಲೆ ಹೊರಡುವರು.

ಹಿಂದಿನ ಮಹಾಯುದ್ಧದಲ್ಲಿ ಬ್ರಿಟಿಷ್ ಮುಖ್ಯಮಂತ್ರಿಗಳಾಗಿದ್ದ ಏ || ಲಯಡ್ ಜಾರ್ಜರು ದೈವಾಧೀನರಾದರು.

ಚುಂಕಿಂಗಿನಿಂದ ಬಂದಿರುವ ವಾರ್ತೆಯಂತೆ, ಮಂಚೂರಿಯಾದ ಉತ್ತರ ಪ್ರಾಂತ್ಯದ ಮೂಲಕರ್ತನರು ಜಪಾನರ ಮೇಲೆ ಮುತ್ತುವ ಭಯವು ಜಪಾನರಿಗಿರುವುದೆಂದೂ, ಹೇಳಲಾಗಿದೆ.

ತುರ್ಕಿಯಲ್ಲಿ 120 ಮಂದಿ ಗೆಸ್ಟಾಪೊ ಏಜೆಂಟರನ್ನು ಏಚಾರಣೆಮಾಡಲಿರುವರು.

ಂ ಂ

ಕಾಂಗ್ರೆಸ್ಸಿನ ಮುಖಂಡರನ್ನೆಲ್ಲಾ ಬಿಡುಗಡೆ ಮಾಡಲು ಸಿಂಧ್ ಸರಕಾರವು ನಿರ್ಧರಿಸಿದೆ

ಂ ಂ

ಇನ್ನು ಮುಂದೆ ಫ್ರೋನಿನಲ್ಲಿ ಯಾರೂ ಅನುಸಯೋಗವಾದ ಮಾತನಾಡದಿರಲು ಮದರಾಸು ಸರ್ಕಾರ ಎಚ್ಚರಿಸಿದೆ,

ಂ ಂ

ಲೂಡಿಯಾನದತ್ತಿರ ವಿಕ್ಟರಿ ಚಾತ್ರೆಯಾಯಿತು. ಆ ಕಾಲದಲ್ಲಿ ಸೂಳೇರ ನರ್ತನ, ಹಾಡುಗಾರಿಕೆ ಮಾಡಿದವರಿಗೆ ಎರಡು ಲಕ್ಷ ರೂಪಾಯಿ ಮೇಲೆಯೇ ವಸೂಲಾಯಿತು, ಈ ವಿಷಯ ಕೇಂದ್ರ ಸೆಭೆಯಲ್ಲಿ ತೀವ್ರವಾಗಿ ಖಂಡಿಸಲಾಯಿತು.

ಂ ಂ

ಮುಂಬೈಸಲ್ಲಿ ಪೌರಸಭೆಯಲ್ಲಿ ನಾಮಕರಣ ಸದಸ್ಯರನ್ನು ನೇಮಿಸುವುದನ್ನು ಮನ್ನಾ ಮಾಡಬೇಕೆಂದು ಬಹುಮತದಿಂದ ತೀರ್ಮಾನವಾಯಿತು. ಅಲ್ಲಿ 17 ಮಂದಿ ಸದಸ್ಯರಿರುವುದು ; ಅ ವೈಕಿ 3 ಮಂದಿ ಮಾತ್ರ ನಾಮಕರಣದವರು.

ಂ ಂ

ಪದಾರ್ಥದ ಬೆಲೆ ವರ್ತಕರು ಹೆಚ್ಚಿಸದಿರಲು ಮದರಾಸ ಸರ್ಕಾರ ಅನೇಕ ಪದಾರ್ಥಗಳನ್ನು ತಾವೆಕೊಂಡು ಜಕಾತಿ ಮಾಡಲು ನಿರ್ಧರಿಸಿದೆ.

ಂ ಂ

ಮುನಸಿಗಂಜಿಸಲ್ಲಿ ಸರಿಯಾದಷ್ಟು ಒಟ್ಟಿಯಿಲ್ಲದೆ 1000 ಮಂದಿ ಗಂಡಸರೂ ಹೆಂಗಸರೂ ಮಕ್ಕಳೂ ಅರ್ಧ ಬಟ್ಟೆ ಉಟ್ಟು, ಬಟ್ಟೆಯಿಲ್ಲಾ ಎಂದು ಅಧಿಕಾರಿಗಳ ಬಂಗ್ಲೆ ಮುಂದೆ ಸೇರಿ ಬಟ್ಟೆ ರೇಷನಿಂಗು ಮಾಡಿರೆಂದು ಕೇಳಿಕೊಂಡರು.

ಂ ಂ

ಬೆಂಗಳೂರಿಂದ ತುಪ್ಪದ ವ್ಯಾಪಾರಿ ಜನಾಬ್ ಜಮಲುದ್ದೀನವರು ಹಿಂದೂಪುರದಿಂದ ಮೈಸೂರಿಗೆ 436 ಡಾಲ್ಡಾ ತುಪ್ಪದ ಟಿನ್ನನ್ನು ಸಾಗಿಸುವುದು ಪತ್ತೆಯಾಗಿ ರೂ. 500 ರುಲ್ಮಾನೆಯಾಯಿತು. ಡಾಲ್ಡಾ ಹರಾಜಿನಿಂದ ಸರಕಾರಕ್ಕೆ ರೂ. 11200 ಉತ್ಪತ್ತಿಯಾಯಿತು.

ಭಾರತದ ಬಿಕ್ಕಟ್ಟಿನ ಪರಿಹಾರದ ವಿಷಯದಲ್ಲಿ ಲಾರ್ಡ್ ವೇವೆಲ್ಲರು ಶ್ರೀ ಬಲ್ಲೂಭಾಯ್ ದೇಸಾಯಿಯವರ ಸಲಹೆಗೆ ಒತ್ತಾಯ ಕೊಡುವರೆಂದು ಲಂಡನ್ನಿನಲ್ಲಿ ನಂಬಲ್ಪಟ್ಟಿದೆ.

ಂ ಂ

ಸ್ಯಾರಿಸ್ಸಿನಲ್ಲಿ ಒಬ್ಬ ಫ್ರೆಂಚ್ ಸ್ತ್ರೀಯು ಕಾನು ಫ್ರೆಂಚರ ಸಂಗಡ ಕೆಲಸಮಾಡುವುದಕ್ಕಿಂತ ಜರ್ಮನರ ಸಂಗಡ ಕೆಲಸ ಮಾಡಲು ಇಚ್ಛಿಸುತ್ತೇನೆಂದು ಹೇಳಿದ್ದಕ್ಕೆ 5 ವರ್ಷ ಕಠಿಣ ಸೆಜವಾಯಿತು. ಅಂದರೆ ಜರ್ಮನರಿಗೆ ಸಹಾಯಕ್ಕಲ್ಲ, ಸಂಗಡ ಮಾತ್ರವೆಂದರ್ಥ.

ಂ ಂ

ಸಿಂದ್ ಅಸೆಂಬ್ಲಿಯಲ್ಲಿ ಒಬ್ಬ ಸದಸ್ಯರು ಈಗ 6 ವರ್ಷಗಳಿಂದ ಇಂಗ್ಲೀಷ್ ಭಾಷೆ ಬಾರದೆ ವೌನದಿಂದ ಕೂತಿರುತ್ತಿದ್ದರು. ಅವರು ಇಂಗ್ಲೀಷು ಕಲಿತು ಈಗ ಇಂಗ್ಲೀಷ್ ಭಾಷೆಯಲ್ಲೇ ಮಾತನಾಡಲು ಉಪಕ್ರಮಿಸಿದರು.

ಂ ಂ

ಪೌರ್ಟಪೆನ್ ಈಚಿಗೆ ಬಂದದ್ದು ರಫ್ಯಾದಲ್ಲಿ ಬಹು ಪುರಾತನ ಕಾಲದಿಂದಲೂ ಇಲ್ಲಿ ಉಪಯೋಗದಲ್ಲಿದೆ.

ಂ ಂ

ಕಾಲೇಜಿನ ಉಪಾಧ್ಯಾಯರ ಸಂಬಳ ರೂ. 150 ಕ್ಕೆ ಕಮ್ಮಿ ಇರಬಾರದೆಂದು ಪಾಟ್ನಾ ವಿಶ್ವವಿದ್ಯಾನಿಲಯ ನಿಶ್ಚಯಿಸಿದೆ.

ಂ ಂ

ಮದರಾಸಿನ ಲಕ್ಷ್ಮೀಕಾಂತಂ ಖೂನಿ ಮೊಖದ್ದಮೆಯ ಷೆಷನ್ಸ್ ವಿಚಾರಣೆಯಲ್ಲಿ, ಶ್ರೀರಾಮುಲು ನಾಯ್ಡು ಪರ ಬೊಂಬಾಯಿನ ಶ್ರೀ ಕೆ. ಎಂ. ಮುನ್ಷಿಯವರೂ, ತ್ಯಾಗರಾಜಭಾಗವತರ ಪರ ಮಿ || ರೊಲೆಂಡ್ ಬ್ರಾಡೆಲ್ ಮತ್ತು ವಿ. ರಾಜಗೋಪಾಲಾಚಾರ್ಯರೂ, ಎಕ್. ಎಸ್. ಕೃಷ್ಣ ಪರ ಶ್ರೀ ವಿ. ಎಲ್ ಎತಿರಾಜ್ ಮತ್ತು ಗೋವಿಂದ ಸ್ವಾಮಿ ನಾಕ್ಷರೂ ವಾದಿಸಲು ವಕಾಲತ್ತು ಪಡೆದಿರುತ್ತಾರೆ.

ಂ ಂ

ಮದರಾಸಿನಲ್ಲಿ ಎಂಟರ್ ಟೇನ್ಮೆಂಟ್ ಟ್ಯಾಕ್ಸಿಗೆ ಶೇಕಡ 50 ರಷ್ಟು ಹೆಚ್ಚಿಸಿದೆ.

ಂ ಂ

ಮೈಸೂರು ನ್ಯಾಯವಿಧಾಯಕ ಸಭೆಯು 20-6-44 ರಲ್ಲಿ ಸೇರುವುದು. 21-6-45 ರಲ್ಲಿ ಹೊಸ ಅಧ್ಯಕ್ಷ ಚುನಾವಣೆ ನಡೆಯಲಾಗುವುದು.

ಆರೋಗ್ಯ ಸೌಖ್ಯ ನಮ್ಮ ಜನ್ಮ ಹಕ್ಕು

— ಪ್ರತಿ ಊಟವನ್ನು ಔತಣದಂತೆ ಮಾಡಿಕೊಳ್ಳಿರಿ —

ನಿಮಗೆ ಆರೋಗ್ಯಕರವಾದ, ಸಂತಸದಾಯಕವಾದ ಊಟ, ರುಚಿಕರವಾದ ಉಪ್ಪಿನಕಾಯಿ, ಸಾರು, ಹುಳಿ, ವ್ಯಂಜನ ಬೇಕಾದರೆ ಟಿ.ಜಿ. ಹಿಂಗನ್ನು ಸ್ವಲ್ಪಹಾಕಿ. ಆಗ ನೋಡಿ ಅದರ ಗುಣ. ಒಂದು ದಿವಸ ಉಪಯೋಗಿಸಿದರೆ ಆಮೇಲೆ ಟಿ.ಜಿ. ಹಿಂಗನ್ನು ಪ್ರತಿದಿನವೂ ಉಪಯೋಗಿಸುತ್ತೀರಿ

1 ಪೌಂಡ್, ಅರ್ಧ ಪೌಂಡ್ ಕಾಲು ಪೌಂಡ್ ಮತ್ತು 1 ಪಲಗಳಲ್ಲಿ ಎಲ್ಲಾ ವ್ಯಾಪಾರಿಗಾರರಲ್ಲೂ ಮತ್ತು ಈ ಕೆಳಗಿನ ವಿಳಾಸದಾರರಲ್ಲೂ ದೊರೆಯುವುದು.

ವಲ್ಲಭದಾಸ್ ತೇಜ್‌ಪಾಲ್,

ಹಿಂಗು, ಕಸ್ತೂರಿ. ಕೇಸರಿ ವ್ಯಾಪಾರಿಗಾರರು,

14 ಗೋವಿಂದಪ್ಪ ನಾಯಕ್ ಬೀದಿ, ಜಿ.ಟಿ. ಮದರಾಸ್.

ಕಿಕ್ಕಿರಿದ ಜನಸಂದಣಿಯಿಂದ ತುಂಬಿದ ಅಮೋಘ 2 ನೇ ವಾರ

At Ranjit ❁ Pagli Duniya

ರಣಜಿತ್ ಟಾಕೀಸಿನಲ್ಲಿ

ಪ ಗ ಲಿ ದು ನಿ ಯಾ

(ಹಿಂದಿ)

ನುಮ್ಮಾಜ್ ಶಾಂತಿ ಮೋತಿಲಾಲ್ ಷೇಕ್‌ಮುಕ್ತಾರ್

ಪಾತ್ರವಹಿಸಿರುವರು.

AT OPERA — DOST

ಅಪೆರಾ ಟಾಕೀಸ್ 2 ನೇ ವಾರ

ಮೋತೀಲಾಲ್, ನೂರ್‌ಜಹಾ ಪಾತ್ರವಹಿಸಿರುವ

ದೋ ಸ್ತ್ (ಹಿಂದಿ)

— NEXT CHANGE —

Air Raid Wardens

With Stan Laurel & Oliver Hardy

Recruits will be interviewed for the Technical Branches of the

NAVY, ARMY & AIR FORCE

at the following towns on dates as under:—

Vacancies exist for CLERKS & TECHNICIANS in all Branches of the Service.

Town	Date	Place of Interview
MYSORE	2nd to 4th April 1945	Mr. Theobald's Bungalow Church Road Mysore
HUNSUR	5th April 1945	Traveller's Bungalow
VIRAJPET	6th to 7th April 1945	Inspection Bungalow
MERCARA	7th to 9th April 1945	North Coorg Club
MANDYA	10th to 11th April 1945	Travellers' Bungalow

ಯುದ್ಧ ಮುಗಿದ ನಂತರ ಪ್ರಪಂಚದ ಎಲ್ಲಾ ವಾರ್ತಾಕಾರರಿಗೆ ಸಂಪೂರ್ಣ ಅಧಿಕಾರವಿರಬೇಕೆಂದು 10 ರಲ್ಲಿ 7 ಮಂದಿಯಂತೆ ಅಮೇರಿಕಾದಲ್ಲಿ ಬೆಂಬಲವಿತ್ತಿರುವರು.

ನೀರಿನ ಮಟ್ಟ ಕಮ್ಮಿ ಇರುವುದರಿಂದ ಬೃಂದಾವನದ ದೀಪೋತ್ಸವವು ಹಂಗಾಮಿಯಾಗಿ ನಿಲ್ಲಿಸಿದೆ.

ರಾಜಧಾನಿಯಲ್ಲಿ ಎಸ್. ಎಸ್. ಎಲ್. ಸಿ. ಪರೀಕ್ಷೆ ಪ್ರಶ್ನೆಗಳು ಪರೀಕ್ಷೆಗೆ ಮುಂಚಿಯೇ ಅನೇಕ ವಿದ್ಯಾರ್ಥಿಗಳಿಗೆ ತಿಳಿದಿತ್ತೆಂದು ಜನರಾಡಿಕೊಳ್ಳುತ್ತಿರುವುದು.

ಹಿಟ್ಲರ್ ಜರ್ಮನಿಯಿಂದ ಓಡಲು ಸಕಲ ಪ್ರಯತ್ನ ಮಾಡಿರುತ್ತಾನೆಂದು ಸ್ವಿಡ್ಜರ್‌ಲೆಂಡಿನಿಂದ ವಾರ್ತೆ ಬಂದಿದೆ.

ಶುದ್ಧವಾದುದೆಂದು ಗ್ಯಾರಂಟಿ. ಯಾವ ಅಪರಿಶುದ್ಧವಾದ ಪದಾರ್ಥ ಮಿಶ್ರವಾಗಿಲ್ಲ. ದೇವಸ್ಥಾನಗಳಲ್ಲೂ, ಪೂಜಾಕಾರ್ಯಕ್ಕೂ, ಔಷಧಗಳಿಗೂ, ಆಹಾರಗಳಿಗೂ, ಶುಭ ಸಂತೋಷ ಕಾರ್ಯಗಳಲ್ಲಿಯೂ ಉಪಯೋಗಿಸಲರ್ಹವಾಗಿದೆ.

.... ಶ್ರೀ ಓಂ ಬ್ರಾಂಡ್ ಕೇಸರಿ ....

ಕೇಸರಿಯನ್ನು ಗಿರಾಕಿಗಳ ಅನುಕೂಲಕ್ಕಾಗಿ 1 ತೊಲ, 5 ತೊಲ, 1 ಪೌಂಡ ಅಥವ ಹೆಚ್ಚಾಗಿ ಬಿಕರಿಗೆ ಇಡಲಾಗಿದೆ.

ಸಾವರ್ಕ್ ಬ್ರಾಂಡ್

ಓಂ ಬ್ರಾಂಡ್ ಕೇಸರಿಯ ಪುಡಿಯನ್ನು ಕಾಲು ತೊಲ, ಅರ್ಧ ತೊಲ, ಒಂದು ತೊಲ, ಐದು ತೊಲ ಮತ್ತು ಒಂದು ಪೌಂಡುಗಳಲ್ಲಿ ಬಿಕರಿಗೆ ಏರ್ಪಾಡಾಗಿದೆ

ಅಲ್ಲದೆ ಪುಡಿ ಮತ್ತು ಮಿಶ್ರ ಕೇಸರಿಯನ್ನು 16|1 ತೊಲ, 8|1 ತೊಲ, 4|1 ತೊಲ, ಅರ್ಧ ತೊಲ, ಒಂದು ತೊಲ ಐದು ತೊಲ ಮತ್ತು ಚಿಲ್ಲರೆಯಾಗಿಯೂ ಬಿಕರಿಗೆ ಇಟ್ಟಿದೆ. ಇವು ಹೊಟಲ್ ಉಪಯೋಗಕ್ಕೆ ಉಪಯುಕ್ತವಾದುದ್ದು. ಒಂದು ಸಲ ಉಪಯೋಗಿಸಿದರೆ ನಮ್ಮ ಕೇಸರಿಯ ಮಹತ್ವ ತಿಳಿಯುವುದು.

ಎಲ್ಲಾ ವರ್ತಕರು ಈ ಕೇಸರಿಯನ್ನು ಮೂರುವರು. ಮತ್ತು —

ವಲ್ಲಭದಾಸ್ ತೇಜ್ ಪಾಲ್ ಹಿಂಗು, ಕೇಸರಿ, ಪಚ್ಚಕರ್ಪೂರ ವರ್ತಕರು

14. ಗೋವಿಂದಪ್ಪ ನಾಯಿಕ' ಬೀದಿ ಬಿ.ಟಿ. ಮದರಾಸ್.

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಶಕ್ತಿಸುಧಾ

ಸೇವನೆಯೇ ಸುಲಭೋಪಾಯ

ಬೆಲೆ ಡಬ್ಬಿ ಒಂದಕ್ಕೆ ಒಂದು ರೂಪಾಯಿ.

ಶಕ್ತಿಸುಧಾ, ೧೦೬೭ ಚಾಮರಾಜಪುರಂ ಮೈಸೂರು.

ಅಕ್ಷರ ಶಾಮಾ ಜಿಕ

ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವ ವರೆಗೂ ಊಟಕ್ಕೆ ಕೂಡ ಏಳಲು ಮನ ಸ್ಸಾಗುವುದಿಲ್ಲ. ಬೆಲೆ 6 ಆಣೆ. ವೀಪ್ಯೇ ಜು 1 ಆಣೆ. ಮುಂಗಡ ಕಳುಹಿಸಬೇಕು.

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

ಸತ್ಯವಾದಿ

ಸತ್ಯವಾದಿ ವಾರದಸಂಚಿಕೆ ಎಲ್ಲಾ ಊರುಗಳಲ್ಲೂ ಏಜಂಟರುಗಳು ಬೇಕಾಗಿದಾರೆ. ಹೆಚ್ಚಿನ ವಿಷಯಗಳಿಗೆ ಬರೆಯಿರಿ.

ಮ್ಯಾನೇಜರ್, ಸತ್ಯವಾದಿ

ಚಾಮರಾಜಪುರಂ ಮೈಸೂರು

For Good Printing—

L. N. Press

Srirampet MYSORE

ಅಂದವಾದ ಹೊಲಿಗೆಗೆ

— ನಮ್ಮಲ್ಲಿ ಬನ್ನಿ —

ಶ್ರೀ ಮಹಾಲಕ್ಷ್ಮಿ ಹಾಲ್

ಸಯ್ಯಾಜಿರಾವ್ ರಸ್ತೆ. ಮೈಸೂರು

Edited, Printed and published by M. S. Krishna Rao, at the Satvavadi Press, Chamaraja Agrahar, Mysore

ಭಗವತ್ ಪ್ರತಿಜ್ಞೆ

ಮಾರ್ಕಂಡೇಯ, ಸಾವಿತ್ರಿ-ಸತ್ಯವಾನ್ ಮೊದಲಾದವರ ಚರಿತ್ರೆಗಳು ಪುರಾಣಗಳಲ್ಲಿ ಹೇಳಿವೆ- ಇವುಗಳನ್ನು ಓದಿ ಕೇಳದೇ ಇರುವವರು ಯಾರೂ ಇಲ್ಲ ವೆನ್ನಬಹುದು. ಅವರುಗಳಿಗೆ ಪರಮಾತ್ಮನಲ್ಲಿ ಇರತಕ್ಕ ಅಚಲಭಕ್ತಿಗಾಗಿ ಕೆಲವರು ಆನಂದಿಸುವರು, ಇನ್ನು ಕೆಲವರು ಇವೆಲ್ಲಾ ಕಟ್ಟಕತೆ, ಇವನ್ನೆಲ್ಲಾ ನಿಜವೆನ್ನೋಣವೇ ಎನ್ನುವರು.

ಆದರೆ ಇದೇ ತಿಂಗಳಲ್ಲಿ ತಿರುಪತಿಯಲ್ಲಿ ನಡೆದ ಒಂದು ವಿಚಿತ್ರ ಘಟನೆಯು ಹೀಗಿದೆ.—

ನಾಗಪುರದ ಕಡೆಯವರು, ಸಾಧಾರಣ ಶ್ರೀಮಂತರು. ಅವರ ಒಬ್ಬನೇ ಒಬ್ಬ ಮಗನಿಗೆ ಹನ್ನೊಂದನೆಯ ವಯಸ್ಸಿನಲ್ಲಿ ಕಂಟಕವಿರುವುದಾಗಿಯೂ ತೀರ್ಥಯಾತ್ರೆ ದೇವಭಕ್ತಿ ಇತ್ಯಾದಿ ನಡೆಸುವೇಕೆಂದೂ ಜೋಯಿಸರು ಕೆಲವರು ಹೇಳಿದ್ದರಂತೆ.

ಅದಕ್ಕನುಸಾರವಾಗಿ ಗಂಡಹೆಂಡತಿಯರಿಬ್ಬರೂ ತಮ್ಮ ಹನ್ನೊಂದು ವರ್ಷ ವಯಸ್ಸಿನ ಹುಡುಗನನ್ನು ಬಹಳ ಅಕ್ಕರೆಯಿಂದ ಹರಿದು ಕ್ಷಣವೂ ಆತನನ್ನು ಬಿಗಲಿ ಇರದೇ ಸದಾ ಉಸ್ತುವಾರಿಯಲ್ಲಿಯೇ ಅನೇಕ ತೀರ್ಥ ಕ್ಷೇತ್ರಗಳನ್ನು ಸಂಚಾರ ಮಾಡಿದರು. ತಿರುಪತಿಗೂ ಬಂದರು. ತಮ್ಮ ಮಗನನ್ನು ಬಹಳ ಕಷ್ಟಪಟ್ಟಾದರೂ ಹೆಗಲ ಮೇಲೆ ಕೂರಿಸಿಯೇ ಬೆಟ್ಟವನ್ನು ಹತ್ತಿದರು. ದೇವರ ದರ್ಶನ ಮಾಡಿ ಮಗನ ದೀರ್ಘಾಯುಸ್ಸಿಗಾಗಿ ಪರಮಾತ್ಮನಲ್ಲಿ ಪ್ರಾರ್ಥಿಸಿದರು.

ಮಾರನೆಯ ದಿನ ಬೆಳಿಗ್ಗೆ ಬೆಟ್ಟದ ಮೇಲೆ ದೇವಸ್ಥಾನದ ಪಕ್ಕದಲ್ಲಿಯೇ ಇರುವ ಸ್ವಾಮಿ ಪುಷ್ಕರಣಿ ತೀರ್ಥದಲ್ಲಿ ಸ್ನಾನ ಮಾಡಲು ಹೋದರು. ನೀರಿನಲ್ಲಿಯೇ ಅಪಾಯ ಸಂಭವಿಸಬಹುದೆಂದು ಜೋಯಿಸರು ಭವಿಷ್ಯ ಹೇಳಿದ್ದರಂತೆ. ಅದಕ್ಕಾಗಿ ತಂದೆಯು ಮಗನ ಕೈಯನ್ನು ಬಿಡಲೇ ಇಲ್ಲ. ಮಗನಿಗೆ ಮೊಳಕಾಲಿನಷ್ಟು ನೀರಿನಲ್ಲಿ ನಿಲ್ಲಿಸಿ ತಾನೇ ರಟ್ಟೆ ಹಿಡಿದು ಸ್ನಾನ ಮಾಡಿಸುತ್ತಿದ್ದನು. ಮಗನ ಕೈಯಲ್ಲಿ ಯಾವುದೋ ಒಂದು ಪದಾರ್ಥವಿದ್ದಿತು. ನೀರು ತಗುಲಿ ಹಾಳಾಗ ಬಹುದೆಂದು ಮಗನ ಕೈಯಿಂದ ಅದನ್ನು ತೆಗೆದು ಸೋಪಾನದ ಮೇಲೆ ಇಟ್ಟನು ಹಾಗೆ ಅಡಸ್ಸು ತೆಗೆದಿಡುವಾಗ ಮಗನ ಕೈಯನ್ನು ಬಿಡಬೇಕಾಯಿತು. ಅಷ್ಟರಲ್ಲಿಯೇ ಮಗನು ನೀರಿಗೆ ಜಿಡ್ಡೀಟಿಟ್ಟನು. ಮಗನು ನೀರಿನಲ್ಲಿ ಮುಳುಗಿರುವುದನ್ನು ನೋಡಿದ ತಾಯಿಯು, ಇದ್ದ ಒಬ್ಬ ಮಗನನ್ನು ಕಳಕೊಂಡು ಒದು ಕಿರಬಾರದೆಂದು ತಾನು ನೀರಿಗೆ ಧುಮುಕಿದಳು. ಇಷ್ಟರೊಳಗಾಗಿ ನೀರಿಗೆ ಬಿದ್ದ ಹುಡುಗನು ಎರಡು ಮೂರು ನೂರಿ ನಷ್ಟು ದೂರಹೋಗಿ ಕೈಗೆ ಸಿಕ್ಕದಂತಾದನು. ಹೆಂಡತಿಯು ಹೆಚ್ಚು ದೂರ ಹೋಗಿರಲಿಲ್ಲವಾದ ಕಾರಣ ಗಂಡನು ಅಕೆಯ ಜುಟ್ಟನ್ನು ಹಿಡಿದೆಳೆದು ಸೋಪಾನದ ಮೇಲೆ ಹಾಕಿದನು. ನೂರಾರು ಜನಗಳು ಅಲ್ಲಿಯೇ ಇದ್ದರಾದರೂ ಯಾರೂ ಯಾವ ಪ್ರಯತ್ನವನ್ನೂ ಮಾಡಲಿಲ್ಲ. ಅಷ್ಟರೊಳಗಾಗಿ ನಾಲ್ಕೈದು ಮಾರು ದೂರದ ನೀರಿನಲ್ಲಿ ಮುಳುಗೇಳುತ್ತಿದ್ದ ಹುಡುಗನನ್ನು ಯಾರೋ ಒಬ್ಬ ಹುಡುಗನು ದಡಕ್ಕೆ ತಂದು ಸೋಪಾನದ ಬಳಿ ನಿಂತಿರುವ ಆ ಮುದಿ ದಂಪತಿಗಳ ವಶಕ್ಕೆ ಕೊಟ್ಟನು. ಹುಡುಗನ ಆರೈಕೆ ವಿಷಯವಾಗಿ ಜನಗಳು ತಮ್ಮ ತಮ್ಮ ಸೂಚನೆಗಳನ್ನು ಕೊಡುವ ಸಮಯದಲ್ಲಿ, ತಂದು ಕೊಟ್ಟ ಹುಡುಗನು ಅಲ್ಲಿಯೇ ಅಲ್ಲಿಯೇ ಮಾಯವಾದನು. ಜನಗಳೆಲ್ಲಾ ಆಶ್ಚರ್ಯವಾಯಿತು. ಯಾತ್ರಿಕನು, ತನ್ನ ಮಗನನ್ನು ತಂದು ಕೊಟ್ಟ ಹುಡುಗನು ತನಗೆ ಪುನಃ ಸಿಕ್ಕ ಬೇಕೆಂದೂ ಆತನಿಗೆ ತಕ್ಕ ಸಂಭಾವನೆ ಮಾಡುವುದಾಗಿಯೂ ಅಲ್ಲೆಲ್ಲಾ ಬಹಳವಾಗಿ ಸಾರಿದನು. ಆ ಹುಡುಗನು ಸಿಕ್ಕಲೇ ಇಲ್ಲ. ಭಗವಂತನೇ ತನ್ನ ಮಗನನ್ನು ರಕ್ಷಿಸಿದನೆಂದು ತಿಳಿದು ತಿರುಪತಿಯಲ್ಲಿಯೇ ದೇವರಿಗೆ ನಾನಾವಿಧ ಸೇವೆಗಳನ್ನು ನಡೆಸುತ್ತಾ ಅಲ್ಲಿಯೇ ಇದ್ದನು. ಪಾಪ ಯಶಃ ಈಗಲೂ ಅಲ್ಲಿಯೇ ಇರಬಹುದು. ಇದು ನಡೆದಿರುವುದು ಇದೇ ತಿಂಗಳು ಎರಡನೆಯ ತಾರೀಖಿನ ದಿನ.

" ಅನನ್ಯಾಶ್ಚಿಂತಯಂತೋಮಾಂ
ಯೇಜನಾಃ ಪರ್ಯುಪಾಸತೇ | ತೇ
ಷಾಂ ನಿತ್ಯಾಭಿಯುಕ್ತಾನಾಂ ಯೋಗ
ಕ್ಷೇಮಂ ವಹಾಮ್ಯಹಂ ॥ ",

ಇದಲ್ಲವೇ ಪರಮಾತ್ಮನ ಅಭಯವಾಣಿ !

ಲಂಡನ್ನಿನ ಒಂದು ಸಿನಿಮಾ ಮಂದಿರದಲ್ಲಿ ಗುರುವಾರದ ದಿವಸ 'ಪಡೋಸಿ' ಎಂಬ ಭಾರತ ಚಲನ ಚಿತ್ರ ಪ್ರದರ್ಶಿಸಲಾಗುವುದು. ಬ್ರಿಟನ್ನಿನಲ್ಲಿ ಭಾರತ ಚಲನ ಚಿತ್ರ ಪ್ರದರ್ಶನವು ಇದೇ ಮೊದಲು.

ಹಿಟ್ಲರ್ ಜೋಯಿಸನ ಮರಣ

ಹಿಟ್ಲರಿನ ಸ್ವತಂತ್ರ ಜೋಯಿಸನಾದ ಕಾರ್ಲ್ ಅರ್ನೆಸ್ಟ್ ಕ್ರಾಪ್ಫ್ ಎಂಬಾತನು ಮೂರು ವರ್ಷ ಮುಂಚಿತವಾಗಿ ನಿರ್ಬಂಧದಲ್ಲಿದ್ದು ಕಷ್ಟಪಟ್ಟು ಕೆಲವು ದಿವಸಗಳ ಹಿಂದೆ ನಿಧನನಾದನು.

೧೯೩೩ ರಲ್ಲಿ ಹಿಟ್ಲರ್ ಅಧಿಕಾರಕ್ಕೆ ಬರುವ ಮೊದಲು ಈ ಜೋಯಿಸನು ಹಿಟ್ಲರಿನ ಜಾತಕ ನೋಡಿ ಹಿಟ್ಲರಿನ ಮೇಲೆ ಆಕ್ರಮಣವೊಂದು ನಡೆಯುವುದೆಂದು ಹೇಳಿ ತಾತ್ಕಾಲಿಕವಾಗಿ ಸಹ ಕೊಟ್ಟನು. ಅದೇ ರೀತಿ ಹಿಟ್ಲರ್ ಆಕ್ರಮಣಕ್ಕೆ ಒಳಗಾದನು. ಈ ಕೃತ್ಯದಲ್ಲಿ ಕ್ರಾಪ್ಫ್ ಭಾಗಿಯಾಗಿರಬಹುದೆಂದು ಅವನನ್ನು ಜರ್ಮನ್ ಅಧಿಕಾರಿಗಳು ದಸ್ತಗಿರಿ ಮಾಡಿದರು. ಆದರೆ ಹಿಟ್ಲರನು ಅವನನ್ನು ಕರೆಸಿಕೊಂಡು ಬರ್ಜಿಟ್ಸ್ ಗೇಡನ್ಸಿನಲ್ಲಿ ತನ್ನ ಬಳಿಯಲ್ಲೇ ಅವನನ್ನು ಸಲಹೆಗಾರನನ್ನಾಗಿ ಇಟ್ಟುಕೊಂಡನು ಮತ್ತು ಅನೇಕ ವೇಳೆ ಹಿಟ್ಲರನು ಈತನನ್ನು ಜ್ಯೋತಿಷ್ಯ ಫಲ ಕೇಳುತ್ತಿದ್ದನು. ಆದರೆ ಹೆಸ್ ಇಂಗ್ಲೆಂಡಿಗೆ ಪಲಾಯನ ಮಾಡಿದುದನ್ನು ಕ್ರಾಪ್ಫ್ ಮುಂದಾಗಿ ತಿಳಿಸಲು ಅಸಮರ್ಥನಾದಾಗ ಅವನ ದಸ್ತಗಿರಿಯೂ ಆಯಿತು. ಕ್ರಾಪ್ಫ್‌ನ ಜ್ಯೋತಿಷ್ಯದಲ್ಲಿ ಮುಸಲೋನಿ ರಿಬ್ಬನ್‌ಟ್ರಾಪ್ ಜನರಲ್ ಫ್ರಾಂಕೋ ಮೊದಲಾದವರಿಗೆಲ್ಲ ಆಸಕ್ತಿಯಿತ್ತು.

ಬಾವುಟಗಳಲ್ಲಿ ಕಳ್ಳಸಂತೆ

ಬಾವುಟಗಳ ವ್ಯಾಪಾರದಲ್ಲೂ ಕಳ್ಳಸಂತೆ ! ಇದು, ಇಂಗ್ಲೆಂಡಿನ ಹೊಸ ವಾರ್ತೆ. ಯುರೋಪಿಯನ್ ಯುದ್ಧವು ಯಾಪಕ್ಷಿಣವಾಗಿವುದೆಂದು ಹೇಳಬೇರುವುದಿಲ್ಲ. ವಿಜಯೋತ್ಸವಕ್ಕೆ ಎಲ್ಲ ಸಿದ್ಧತೆಗಳಾಗಿವೆ. ಯೂನಿಯನ್ ಜಾಕ್ (ಬ್ರಿಟಿಷ್ ಬಾವುಟ) ಕೊಂಡು ಕೊಳ್ಳಲು ಜನರು ಮುಂದಾಗುತ್ತಿರುವರು. ಬೇಡಿಕೆ ಹೆಚ್ಚಾಗಿ ಬ್ಲಾಕ್‌ಮಾರ್ಕೆಟ್ ತಾನಾಗಿ ಎದ್ದಿದೆ. ಇದರಿಂದ ತಿಳಿಯಬೇಕಾದ ದಿಷ್ಟೆ : ಬ್ರಿಟಿಷ್ ವ್ಯಾಪಾರಸ್ಥನಿಗೆ ವ್ಯಾಪಾರದ ಮಾತು ಬಂದಾಗ ಲಾಭಮಾಡುವುದರಲ್ಲಿ — ಬಾವುಟದ ವಿಷಯವೂ ಭಾವನೆ ಒದಲಾಗುವುದಿಲ್ಲ. ಯೂನಿಯನ್ ಜಾಕ್ ಎಂಬುದು ಬ್ರಿಟಿಷರ ದೇಶಭಕ್ತಿಯ ಭಾವ ಸೂಚಕ ಚಿಹ್ನ. ಬ್ರಿಟಿಷರನು ಅದನ್ನೇ ಗ ಕಾಳಸಂತೆಯಲ್ಲಿಟ್ಟಿರುವನೇ ? (ಪ್ರ)

ಬ್ರಿಟನ್ನಿನಲ್ಲಿ ಟೆಸ್ಟ್ ಟ್ಯೂಬ್ ಮಕ್ಕಳನ್ನು ಔರಸವಾದ ಮಕ್ಕಳಾಗಿ ರಿಜಿಸ್ಟರ್ ಮಾಡುವುದಿಲ್ಲವೆಂದು ಅಲ್ಲಿಯ ಆರೋಗ್ಯ ಮಂತ್ರಿಗಳು ಹೇಳಿದಾರೆ.

ಂ ಂ

ಅಕ್ರಮಿತ ಇಟಲಿಯಲ್ಲಿ ತಮಗೂ ಸ್ವಲ್ಪ ಸಿಕ್ಕಲೆಂದು ಫ್ರೆಂಚರು ಬಯಿಸುತ್ತಿದ್ದಾರೆ

ಆರೋಗ್ಯ ಸೌಖ್ಯ ನಮ್ಮ ಜನ್ಮ ಹಕ್ಕು

— ಪ್ರತಿ ಊಟವನ್ನು ಔತಣದಂತೆ ಮಾಡಿಕೊಳ್ಳಿರಿ —



ನಿಮಗೆ ಆರೋಗ್ಯಕರವಾದ, ಸಂತಸದಾಯಕವಾದ ಊಟ, ರುಚಿಕರವಾದ ಉಪ್ಪಿನಕಾಯಿ, ಸಾರು, ಹುಳಿ, ವ್ಯಂಜನ ಬೇಕಾದರೆ ಟಿ.ಜಿ. ಹಿಂಗನ್ನು ಸ್ವಲ್ಪಹಾಕಿ. ಆಗ ನೋಡಿ ಅದರ ಗುಣ. ಒಂದು ದಿವಸ ಉಪಯೋಗಿಸಿದರೆ ಆ ಮೇಲೆ ಟಿ.ಜಿ. ಹಿಂಗನ್ನು ಪ್ರತಿದಿನವೂ ಉಪಯೋಗಿಸುತ್ತೀರಿ.

1 ಪೌಂಡ್, ಅರ್ಧ ಪೌಂಡ್, ಕಾಲು ಪೌಂಡ್ ಮತ್ತು 1 ಪಲಂಗಳಲ್ಲಿ ಎಲ್ಲಾ ವ್ಯಾಪಾರಗಾರರಲ್ಲೂ ಮತ್ತು ಈ ಕೆಳಗಿನ ನಿಲಾಸದವರಲ್ಲೂ ದೊರೆಯುವುದು.

ವಲ್ಲಭದಾಸ ತೇಜ್‌ಪಾಲ್,
ಹಿಂಗು, ಕಸ್ತೂರಿ, ಕೇಸರಿ ವ್ಯಾಪಾರಗಾರರು,
14 ಗೋವಿಂದಪ್ಪ ನಾಯಕ ಬೀದಿ. ಜಿ.ಟಿ. ಮದರಾಸ್.

ವಿವಿಧ ವರ್ತಮಾನ

ಕಾರ್ವಾರ ತಾಲ್ಲ್ಯ ಪ್ರೈಮರಿ ಸ್ಕೂಲು ಉಪಾಧ್ಯಾಯರ ಸಂಘದವರು ಅಲ್ಲಿಯ ಡಿ | ಬೋರ್ಡು ಅಧ್ಯಕ್ಷರು (1) ತಮಗೆ ಬರುವ ಸಂಬಳ ಸಾಲದುದರಿಂದ ಪ್ರತಿ ಶನಿವಾರ ಬೆಳಿಗ್ಗೆ ಭಿಕ್ಷ ಬೇಡಲು ಅನುಮತಿ ಕೊಡಬೇಕೆಂದೂ (2) ತಮಗೆ ಸಂಬಳವನ್ನು ತಿಂಗಳ ಮೊದಲನೇ ತಾರೀಖಿನ ದಿನವೇ ಕೊಡ ಬೇಕೆಂದೂ, ಠರಾವು ಮಾಡಿರುವರು.

ಭಾರತದಲ್ಲಿ ಒಂದು ಹೊಗೆಸೊಪ್ಪಿನ ಸಮಿತಿ ಸ್ಥಾಪನೆಯಾಗಬೇಕೆಂದು ಅದಕ್ಕೆ ವಾರ್ಷಿಕ ವೆಚ್ಚ 10 ಲಕ್ಷ ರೂಪಾಯಿ ಗಳನ್ನು ಭಾರತ ಸರಕಾರದವರು ಮಂ ಜೂರ್ಮಾಡಿದ್ದಾರೆ.

ಮದ್ರಾಸಿನ ಲಕ್ಷ್ಮೀಕಾಂತಂ ಖೂ ನಿ ನೊಂದ್ದಮೆಯಲ್ಲಿ ವಿಚಾರಣೆಯೆ ಲ್ಲಾ ಮುಗಿದು, ~~ಅಗ್ರ್ಯುಮೆಂಟು ಪ್ರಾ~~ ರಂಭವಾಗಿದೆ.

ಮೈಸೂರು ಸಂಸ್ಥಾನದಲ್ಲಿ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಕುಳಿತಿರು ವ ವಿದ್ಯಾರ್ಥಿಗಳ ಸೆಲಕ್ಷನ್ ಪರೀಕ್ಷೆಯ ಅಂಕಗಳು ಸೆಕ್ರಟರಿಯವರಿಂದ ತರಿಸಿಕೊ ಳ್ಳಲ್ಪಟ್ಟಿದೆಯೆಂದು ಹೇಳಲಾಗಿದೆ.

ಲಾರ್ಡ್ ವೇವಲ್ಲರಿಗೆ ಭಾರತದ ಬಿಕ್ಕಟ್ಟು ಪರಿಹಾರ ಮಾಡಲು ಅಧಿಕಾರ ಕೊಡಬೇಕೆಂದೂ ಇಲ್ಲದಿದ್ದರೆ ವೈಸ ರಾಯಿ ಪದವಿಯೇ ಬೇಕಲ್ಲವೆಂದೂ ಮಿ || ಚರ್ಚಿಲ್ ಮತ್ತು ಬ್ರಿಟಿಷ್ ಮಂ ತ್ರಿಮಂಡಲಕ್ಕೆ ತಿಳಿಸಲು ಅವರು ಇಂ ಗ್ಲೆಂಡಿಗೆ ಹೋಗಿರುವುದೆಂದು ಮಿ || ಗಿ ಲ್ಡರಾಯ್ ಬರೆದಿರುತ್ತಾರೆ.

ದಂಗೆಯು ನಡೆದುದರಿಂದ ಹೆದರಿ ಮುಸೋಲಿನಿಯು ವಿಲಾಸನ್ನು ಬಿಟ್ಟು ಕೋಮೋ ಪಟ್ಟಣಕ್ಕೆ ಓಡಿಹೋದನೆಂದು ವದಂತಿಯಾಗಿದೆ.

ನಾಜೀ ಜನರ ಕ್ರೂರಕೃತ್ಯವನ್ನು ತೋರಿಸುವ ಚಲನಚಿತ್ರಗಳು ನ್ಯೂಯಾರ್ಕಿನಲ್ಲಿ ಪ್ರದರ್ಶಿಸಲ್ಪಡುವವು.

ಫ್ರಾಸ್ಕೋ ಸಮ್ಮೇಳನಕ್ಕೆ ಸ್ವಾಮಿನ್ನಾಥನ್ ಐಯರ್ ಅಧ್ಯಕ್ಷರಾಗಿರುವುದಕ್ಕೆ ರಷ್ಯಾ ಪ್ರತಿನಿಧಿ ಮಾಲ್ಟೋವರು ಪ್ರತಿ ಭಟಿಸಿದ್ದಾರೆ.

ಹೃದ್ರೋಗದ ಬೆನೆಯಿಂದ ಒರ್ವನಿ ಯ ವಿಮಾನ ದಳದ ನಾಯಕತ್ವಕ್ಕೆ ಗೋ ರಿಂಗ್ ರಾಜೀನಾಮೆ ಇತ್ತಿರುವನೆಂದು ತಿಳಿಸಿ ಬಂದಿದೆ.

ರಕ್ತ ವೃದ್ಧಿಗೆ — ಧಾತುಪುಷ್ಟಿಗೆ

ಶಕ್ತಿಸುಧಾ

ಸೇವನೆಯೇ ಸುಲಭೋಪಾಯ

ಶಕ್ತಿಸುಧಾ, ೧೦೬೭ ಚಾಮರಾಜಪುರಂ ಮೈಸೂರು.

ಬೆಲೆ ಡಬ್ಬಿ ಒಂದಕ್ಕೆ ಒಂದು ರೂಪಾಯಿ.

ಗ್ಲೂಕೋನೇಟ್ - ಡಿ.

.... ಬಿಲ್ಲೆಗಳು ....

ಕ್ಯಾಲ್ಸಿಯಂ ಗ್ಲೂಕೋನೇಟ್
ಮತ್ತು ವಿಟೆಮಿನ್ ಡಿ. ಮಿಶ್ರಿತವಾಗಿದ್ದು
ಚಾಕೊಲೆಟ್‌ನಂತೆ ರುಚಿಕರವಾಗಿದೆ.

ಕ್ಯಾಲ್ಸಿಯಂ ಅಭಾವದ ಎಲ್ಲಾ ಪರಿಸ್ಥಿತಿಗೂ
ಬಸಿರುತನ ಮತ್ತು ಮಕ್ಕಳು ಸ್ತನಪಾನಮಾಡುವ ಅವಧಿಗೂ,
ಮಕ್ಕಳ ಎಲುಬುಗಳು ಸದೃಢವಾಗಲೂ ಇದನ್ನು
ಶಿಫಾರಸು ಮಾಡಲಾಗಿದೆ.

ಐ. ಟಿ. ಎಲ್. ತಯಾರಿಕೆ

ಗೌರ್ನಮೆಂಟ್ ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್
ಲೆಬೊರೇಟರಿ

ಪೋ. ಆ. ಮಲ್ಲೇಶ್ವರಂ — ಬೆಂಗಳೂರು.

ಸತ್ಯವಾದಿ

ಸತ್ಯವಾದಿ ವಾರದಸಂಚಿಕೆ ಎಲ್ಲಾ ಊರುಗಳಲ್ಲೂ ಏಜಂಟರುಗಳು ಬೇಕಾಗಿದಾರೆ ಹೆಚ್ಚಿನ ವಿಷಯಗಳಿಗೆ ಬರೆಯಿರಿ. ಅಂಚೆ ವೆಚ್ಚ ಸೇರಿ ವರ್ಷಕ್ಕೆ 1-14-0
ಮ್ಯಾನೇಜರ್, ಸತ್ಯವಾದಿ

ಅಕ್ಕ

ಸಾಮಾಜಿಕ

ಭಾವಪರಿಪೂರ್ಣವಾದ ಕಥೆ ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವ ವರೆಗೂ ಊಟಕ್ಕೆ ಕೂಡ ಏಳಲು ಮನ ಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು,

ದೊರೆಯುವ ಸ್ಥಳ—
ಸತ್ಯವಾದಿ ಆಫೀಸ್, ಮೈಸೂರು

Edited, Printed and published by M. S. Krishna Rao, at the Satvavadi Press, Chamaraja Agrahar, Mysore

ಅಂದಾದ ಮುದ್ರಣ ಕೆಲಸಕ್ಕೆ
ಧನಲಕ್ಷ್ಮಿ ಪ್ರೆಸ್
ಮೈಸೂರು

For Good Printing—

L. N. Press

Srirampet MYSORE

AT Opera AMANATH

ಅಪೇರಾ ಟಾಕೀಸ್

ಸುತೀರ್ — ಭಾನು — ಹರೀಶ್

ಪಾತ್ರವಹಿಸಿರುವ

ಅಮಾನತ್

(ಹಿಂದಿ)

Morning Shows, From 27-4-45

YOUNG TOM EDISON



ಐ.ಜೆ. ಹಾಲ್, ಸರಾಫ್ ಅಂಗಡಿ
ರವೇ ಬೀದಿ, ಮೈಸೂರು

2 ನೇ ವಾರ

At Ranjit

Police

ಪ್ರೇಂ ಅದೀಬ್ — ರತ್ನಮಾಲಾ

ರಂಜಿತ್ — ಜೀವಕ್

ಮುಂತಾದವರು ಪಾತ್ರವಹಿಸಿರುವ

ಪೋಲೀಸ್

(ಹಿಂದಿ)